<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ</u>

<u>ಸಿ ಸಿ ನಂ. 733/2023</u>

ಫಿರ್ಯಾದುದಾರರು ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿಗಳು

1. ಚಿಕ್ಕಶೆಟ್ಟಿ ಬಿನ್ ಮಾದಶೆಟ್ಟಿ, 41 ವರ್ಷ,
2. ಪುಟ್ಟಮ್ಮ ಕೋಂ ಮಾದಶೆಟ್ಟಿ, 40 ವರ್ಷ,
3. ಶಿವಕುಮಾರ್ @ ಶಿವು ಬಿನ್ ಚಿಕ್ಕಶೆಟ್ಟಿ, 22 ವರ್ಷ,

   ಎಲ್ಲಾರ ವಾಸಃ ವಡ್ಡೇರಿ ಬೀದಿ, ಅಣ್ಣೂರುಕೇರಿ, ಗುಂಡ್ಲುಪೇಟೆ ತಾಲ್ಲೂಕು.

## <u>ದೋಷಾರೋಪಣೆ</u>

ಶ್ರೀ ಬಸವರಾಜ ತಳವಾರ. ಬಿಎ., ಎಲ್ ಎಲ್ ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿಃ 09.09.2023 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದು ಅಣ್ಣೂರು ಕೇರಿ ಗ್ರಾಮದ ವಡ್ಡನೇರಿ ಬೀದಿಯಲ್ಲಿರುವ ಚಾಸಾ–1 ಜವರಶೆಟ್ಟಿ ರವರು ತಮ್ಮ ಮನೆಯಲ್ಲಿ ನನ್ನ ಮಗಳಿಗೆ ಅನ್ಯಾಯವಾಯಿತು ಎಂದು ಬೈಯುತ್ತಿದ್ದಾಗ, ಚಾಸಾ–1 ಜವರಶೆಟ್ಟಿ ರವರ ಪಕ್ಕದ ಮನೆಯಲ್ಲಿದ್ದ ಆರೋಪಿಗಳಾದ ನೀವು ಚಾಸಾ–1 ಜವರಶೆಟ್ಟಿ ರವರನ್ನು ನೀನು ನಮ್ಮನ್ನೇ ಬೈಯುತ್ತಿರುವುದು ಎಂದು ತೀಟೆ ಜಗಳ ತೆಗೆದು ನಿಮ್ಮಗಳ ಪೈಕಿ 1ನೇ ಆರೋಪಿಯಾದ ನೀವು ಚಾಸಾ–1 ಜವರಶೆಟ್ಟಿ ರವರಿಗೆ ಬೋಳಿಮಗನೇ, ಸೂಳೇ ಮಗನೇ ನಾನು ತಿರುಗಾಡುವ ದಾರಿಯನ್ನು ಸೇರಿಸಿ ತಡಿಕೆ ಕಟ್ಟಿಕೊಂಡಿದ್ದೀಯೇ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಹಾಗೂ 2ನೇ ಆರೋಪಿಯಾದ ನೀವು ಚಾಸಾ–1 ಜವರಶೆಟ್ಟಿ ರವರನ್ನು ಲೋಪರ್ ನನ್ನ ಮಗ ನಮ್ಮ ತಿರುಗಾಡುವ ದಾರಿಯ ಮೇಲೆ ಕಣ್ಣು ಹಾಕಿದ್ದಾನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ 504 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ಜವರಶೆಟ್ಟಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 1ನೇ ಆರೋಪಿಯಾದ ನೀವು ಮರದ ರೀಪರ್ ಪಟ್ಟಿಯಿಂದ ಚಾಸಾ–1 ರವರ ತಲೆಗೆ ಹೊಡೆದಿದ್ದು ಮತ್ತು ಅಲ್ಲೆ ಬಿದ್ದಿದ್ದ ಒಂದು ಕಲ್ಲಿನಿಂದ ಚಾಸಾ–1 ಜವರಶೆಟ್ಟಿ ರವರ ಎಡಗೈನ ಮಣಿಕಟ್ಟಿಗೆ ಹೊಡೆದು ಚಾಸಾ–1 ಜವರಶೆಟ್ಟಿ ರವರ

ತಲೆ ಮತ್ತು ಎಕಡೈನ ಮಣಿಕಟ್ಟಿಗೆ ರಕ್ತಗಾಪಡಿಸಿ ತೀವ್ರ ಸ್ವರೂಪದ ಗಾಯಪಡಿಸಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **326** ಸಹವಾಚಕ **34** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ಜವರಶೆಟ್ಟಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 3ನೇ ಆರೋಪಿಯಾದ ನೀವು ಚಾಸಾ-1 ಜವರಶೆಟ್ಟಿ ರವರಿಗೆ ಕೈಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **323** ಸಹವಾಚಕ **34** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ಜವರಶೆಟ್ಟಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 3ನೇ ಆರೋಪಿಯಾದ ನೀವು ಚಾಸಾ-1 ಜವರಶೆಟ್ಟಿ ರವರಿಗೆ ಈ ದಿನ ತಪ್ಪಿಸಿಕೊಂಡಿರಿ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **506** ಸಹವಾಚಕ **34** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ 03.10.2024.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ